# ಕರಗುತ್ತಿರುವ ಹೆಣ್ಣಿನ ಅಸ್ತಿತ್ವದ ರೂಪಕವಾಗಿ ಬಾನು ಮುಷ್ತಾಕ್ ಅವರ 'ಲವ್ ಬರ್ಡ್ಸ್'

**ಸುಧಾ ಬಿ.ಎಸ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ.

DOI: https://doi.org/10.5281/zenodo.17773644

## ABSTRACT:

ಕನ್ನಡ ಮಹಿಳಾ ಸಾಹಿತ್ಯ ಹೊಸ ಹೊರಳುದಾರಿಯತ್ತ ಹೆಜ್ಜೆ ಹಾಕುತ್ತಿರುವುದು ಸಾಹಿತ್ಯಿಕವಾಗಿ ಅಷ್ಟೇ ಅಲ್ಲದೆ ಸಾಂಸ್ಕೃತಿಕವಾಗಿಯೂ ಕೂಡ ಮಹತ್ವದ ಸಂಗತಿ. ಕನ್ನಡಕ್ಕೆ ಬೂಕರ್ ಗರಿಮೆಯನ್ನು ತಂದು ಕೊಟ್ಟ ಬಾನು ಮುಷ್ತಾಕ್ ಅವರ ಕತೆಗಳಲ್ಲಿ ವ್ಯಕ್ತವಾಗುವ ಸ್ತ್ರೀ ಪರವಾದ ಆಲೋಚನೆಗಳು, ಸ್ತ್ರೀವಾದಿ ದೃಷ್ಟಿಕೋನ ಹಾಗೂ ಮಾನವ ಪರ ಕಾಳಜಿಗಳ ದೃಷ್ಟಿಯಿಂದ ಪ್ರಮುಖವಾದದ್ದು. ಪ್ರಸ್ತುತ ಲೇಖನದಲ್ಲಿ ಬಾನು ಮುಷ್ತಾಕ್ ಕತೆಗಳಲ್ಲಿ ಅಸ್ತಿತ್ವವಾದದ ಅಂಶಗಳು ಚರ್ಚೆಗೆ ಒಳಪಟ್ಟಿರುವ ಬಗೆಯನ್ನು ವಿವರಿಸಲಾಗಿದೆ. 'ಲವ್ ಬರ್ಡ್ಸ್' ಕತೆಯಲ್ಲಿ ಹೆಣ್ಣಿನ ಅಸ್ತಿತ್ವ ಹಂತ ಹಂತವಾಗಿ ನಾಶವಾಗುತ್ತಿರುವ ಬಗೆಯನ್ನೂ, ಒಂದು ಹಂತದಲ್ಲಿ ಅದು ವೈಯಕ್ತಿಕತೆಯನ್ನು ಮೀರಿ ಹೆಣ್ಣಿನ ಸಾಮಾನ್ಯ ಸಮಸ್ಯೆಯಾಗಿರುವುದರ ಬಗೆಗೆ ಗಮನ ಹರಿಸಲಾಗಿದೆ.

## KEYWORDS:

ಸ್ತ್ರೀ ಸಂವೇದನೆ, ಹೆಣ್ಣಿನ ಅಸ್ತಿತ್ವದ ಚರ್ಚೆ, ಪುರುಷ ಪ್ರಧಾನ ವ್ಯವಸ್ಥೆ, ಇರುವಿಕೆ ಮತ್ತು ಆಗುವಿಕೆ, ವೈಯಕ್ತಿಕ ಮತ್ತು ಸಾಮಾಜಿಕ ನೆಲೆ.

ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಹಲವು ಕಾರಣಗಳಿಂದಾಗಿ ಇಂದು ಮಹತ್ವವನ್ನು ಪಡೆದುಕೊಂಡಿದೆ. ಇದು ಮಹಿಳಾ ಪ್ರಶ್ನೆಯನ್ನು ಪ್ರಧಾನವಾಗಿ ಚರ್ಚಿಸುವುದರೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಆಗು ಹೋಗುಗಳನ್ನು ಕುರಿತೂ ಕೂಡ ಹೆಣ್ಣಿನ ಅಸ್ತಿತ್ವದ ಪ್ರಶ್ನೆಯನ್ನು ಪ್ರಧಾನವಾಗಿ ಚರ್ಚೆಗೆ ಒಳಪಡಿಸುತ್ತದೆ. ಕೆಲವೊಮ್ಮೆ ಇದು ಮಹಿಳಾ ಬರಹಗಳಲ್ಲಿ ಢಾಳಾಗಿ ಕಂಡುಬಂದರೆ ಇನ್ನು ಕೆಲ ಸಂದರ್ಭದಲ್ಲಿ ಅವರ ಬರವಣಿಗೆಯ ಉದ್ದಕ್ಕೂ ಅಂತರ್ಗತವಾಗಿ ಅಡಕವಾಗಿರುತ್ತದೆ. ಒಟ್ಟಾರೆ ಹೆಣ್ಣಿನ ಪರವಾದ, ಹೆಣ್ಣಿನ ಒಳಿತಿನ ಪರವಾದ ಎಲ್ಲಾ ಬರಹಗಳಲ್ಲೂ ಅವಳ ಅಸ್ತಿತ್ವದ ಚರ್ಚೆ ಕೇಂದ್ರವಾಗಿರುತ್ತದೆ.

ಬಾನು ಮುಷ್ತಾಕ್ ಕತೆಗಳಲ್ಲಿ ಹೆಣ್ಣಿನ ಅಸ್ತಿತ್ವಕ್ಕೆ ಸಂಬಂಧಿಸಿದ ಮಹತ್ವದ ಸಂವಾದಗಳು ಕಂಡುಬರುತ್ತವೆ. ಇವುಗಳನ್ನು ಎರಡು ರೀತಿ ಗುರುತಿಸಬಹುದು. ಒಂದು,

ಹೆಣ್ಣಿಗೆ ಸ್ವತಂತ್ರವಾದ ಅಸ್ತಿತ್ವವೊಂದನ್ನು ಪಿತೃಪ್ರಧಾನ ವ್ಯವಸ್ಥೆ ಉದ್ದೇಶಪೂರ್ವಕವಾಗಿ ಇಲ್ಲವಾಗಿಸಿರುವ ಬಗೆಯನ್ನು ಕುರಿತದ್ದು. ಮತ್ತೊಂದು, ಹೆಣ್ಣು ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿರುವುದನ್ನು, ಅವಳ ಏಳು-ಬೀಳುಗಳನ್ನು ಕುರಿತದ್ದು. ಇವುಗಳಲ್ಲಿ ಹೆಚ್ಚು ಆಸಕ್ತಿದಾಯಕ ಎಂದೆನಿಸುವ ಕತೆಗಳು ಪುರುಷ ಪ್ರಧಾನ ವ್ಯವಸ್ಥೆ ಅವಳ ಅಸ್ತಿತ್ವವನ್ನು ನಿರಂತರವಾಗಿ, ಹಂತ ಹಂತವಾಗಿ ಇಲ್ಲವಾಗಿಸುತ್ತಿರುವ ಬಗೆಯನ್ನು ಕುರಿತವುಗಳು. ಇವು ಒಂದು ಹಂತದಲ್ಲಿ ವಾಸ್ತವವನ್ನು ತಿಳಿಸುತ್ತಲೇ ಓದುಗರನ್ನು ವಿವೇಚನೆಗೆ ಹಚ್ಚುತ್ತವೆ. ಅವಳ ಅಸ್ತಿತ್ವವನ್ನು ಇಲ್ಲವಾಗಿಸುತ್ತಿರುವುದರಲ್ಲಿ ವ್ಯವಸ್ಥೆಯ ಪಾಲೆಷ್ಟು, ಅವಳ ಪಾಲೆಷ್ಟು ಎಂಬುದನ್ನು ಚಿಂತನೆಗೆ ಒಳಪಡಿಸುತ್ತವೆ. ಇದರಿಂದ ಹೊರಬರಲು ಇರುವ ಮಾರ್ಗಗಳಾವುದು ಎಂಬುದನ್ನೂ ಕೂಡ ಆಲೋಚಿಸುವಂತೆ ಮಾಡುತ್ತವೆ.

ಮೊದಲಿಗೆ ಅಸ್ತಿತ್ವ ಎಂಬುದನ್ನು 'ಇರುವಿಕೆ'ಗೆ ಸಂಬಂಧಿಸಿದಂತೆ ಗುರುತಿಸಲಾಗಿದೆ. ಇರುವಿಕೆ ಎನ್ನುವುದು ಆ ವ್ಯಕ್ತಿಯ ಬೇಕು, ಬೇಡ, ಆಸೆ-ಆಕಾಂಕ್ಷೆಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತದೆ. ಅಸ್ತಿತ್ವವಾದದ ವ್ಯಾಖ್ಯಾನವೂ ಕೂಡ ಇದನ್ನೇ ಪ್ರತಿಪಾದಿಸುತ್ತದೆ. "ಪ್ರತಿಯೊಬ್ಬರಿಗೂ ತಮ್ಮದೇ ಆದ ಸ್ವತಂತ್ರವಾದ ಮನಸ್ಸು ಮತ್ತು ಇಚ್ಛಾ ಶಕ್ತಿ ಇದೆ. ಆದ್ದರಿಂದಲೇ ಅವರಿಗೆ ಜವಾಬ್ದಾರಿಗಳೂ ಇವೆ. ಒಂದು ವೇಳೆ ಅವರು ತಾವು ಏನು ಆಗಬೇಕೆಂದು ಆಯ್ಕೆ ಮಾಡದಿದ್ದರೆ ಅಥವಾ ಹೊರಗಿನ ಶಕ್ತಿಗಳಿಗೆ ಆಯ್ಕೆ ಮಾಡಲು ಅವಕಾಶ ನೀಡಿದರೆ ಅವರು ತಿರಸ್ಕಾರ ಯೋಗ್ಯರಾಗುತ್ತಾರೆ" (ವಿಮರ್ಶೆಯ ಪರಿಭಾಷೆ. ಪು.ಸಂ. 30) ಎನ್ನಲಾಗಿದೆ. ಮುಂದುವರೆದು "ತೀರ್ಮಾನ ತೆಗೆದುಕೊಳ್ಳುವ, ಆಯ್ಕೆ ಮಾಡಿಕೊಳ್ಳುವ ಇಚ್ಛೆಯ ಕ್ರಿಯೆಗಳೂ ಇದರಲ್ಲೇ ಸೇರುತ್ತವೆ. ಅಸ್ತಿತ್ವವಾದದ ಪ್ರಕಾರ ವ್ಯಕ್ತಿಯ ಅಂತರಂಗದ ಜಗತ್ತಿಗೂ, ಬಾಹ್ಯ ಜಗತ್ತಿಗೂ ಯಾವ ವ್ಯತ್ಯಾಸವೂ ಇಲ್ಲ." ಹಾಗಾಗಿ ಅಸ್ತಿತ್ವವಾದ ಎನ್ನುವುದು ಒಬ್ಬ ವ್ಯಕ್ತಿಯ ವೈಯಕ್ತಿಕ ಬೇಕು, ಬೇಡ, ಆಸೆ, ಆಕಾಂಕ್ಷೆಗಳಿಗೆ ಸಂಬಂಧಿಸಿದ್ದು, ಇವುಗಳಿಗೆ ಯಾವುದೇ ರೀತಿಯ ಒತ್ತಡ, ಒತ್ತಾಯಗಳು ಇರುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಒಟ್ಟಾರೆ ಇರುವಿಕೆ ಮತ್ತು ಆಗುವಿಕೆಯು ಅಸ್ತಿತ್ವವನ್ನು ಅವಲಂಬಿಸಿರುತ್ತದೆ. ಹೆಣ್ಣಿನ ಅಸ್ತಿತ್ವವೂ ಕೂಡ ಅವಳ ಇರುವಿಕೆ ಮತ್ತು ಆಗುವಿಕೆಯ ಪ್ರಕ್ರಿಯೆಯನ್ನು ಅವಲಂಬಿಸಿದೆ.

ಅಸ್ತಿತ್ವದ ಪ್ರಶ್ನೆ ಬಂದಾಗ ಸಮಾಜದಲ್ಲಿ ಹೆಣ್ಣು ಮತ್ತು ಗಂಡಿನ ಬೇಕು-ಬೇಡಗಳಿಗೆ ಭಿನ್ನವಾದ ಪ್ರತಿಕ್ರಿಯೆಗಳಿರುವುದು ಸಹಜವಾಗಿಯೇ ಕಂಡುಬರುತ್ತದೆ. ಗಂಡಿನ ಅಸ್ತಿತ್ವ ಸಂಪೂರ್ಣವಾಗಿ ಅವನ ಹಿಡಿತದಲ್ಲಿದ್ದರೆ ಅಥವಾ ಅವನಿಗೆ ಅನುಕೂಲಕರವಾಗಿದ್ದರೆ, ಹೆಣ್ಣಿನ ಅಸ್ತಿತ್ವ ಅವಳ ವೈಯಕ್ತಿಕ ನೆಲೆಯನ್ನು ಮೀರಿ ಕುಟುಂಬ, ಸಮಾಜ, ಸಂಸ್ಕೃತಿಯಿಂದ ನಿರ್ವಹಿಸಲ್ಪಡುತ್ತದೆ. ಹಾಗಾಗಿ ಹೆಣ್ಣಿನ ವೈಯಕ್ತಿಕತೆ ಎಂಬುದು ಸಾಮಾಜಿಕ ಎಲ್ಲೆಯ, ಸಾಂಸ್ಕೃತಿಕ ಒಪ್ಪಿಗೆಯ, ಕುಟುಂಬದ

ಒಳಿತಿನ, ದಾಂಪತ್ಯದ ಆಶಯದ ಮೇಲೆ ನಿರ್ಧರಿತವಾಗುತ್ತದೆ. ಇದರಿಂದಾಗಿ ಅವಳಿಗೆ ತನ್ನದೇ ಆದ ಸ್ವತಂತ್ರ ಅಸ್ತಿತ್ವವೇ ಇಲ್ಲದಂತಾಗಿ ಅವಳು ಸದಾ ಕಾಲ 'ತಾನು ಯಾರು? ಏನು?' ಎಂಬ ತೊಳಲಾಟದಲ್ಲಿ ಸಿಲುಕುವಂತಾಗಿದೆ. ಜೊತೆಗೆ ನಿರಂತರವಾಗಿ ಅವ್ಯಕ್ತ ಭಯ, ಅಸ್ಥಿರತೆ ಮತ್ತು ಅಸಹಾಯಕತೆಯಲ್ಲಿ ಬಳಲುವಂತಾಗುತ್ತದೆ.

ಹೆಣ್ಣಿಗೆ ವಿವಾಹ, ಕುಟುಂಬ, ದಾಂಪತ್ಯದ ಬಂಧನಗಳು ಸಂಪೂರ್ಣವಾಗಿ ಅವಳನ್ನು ಇಲ್ಲವಾಗಿಸಿ, ಅಸಹಾಯಕ ಸ್ಥಿತಿಗೆ ತಳ್ಳುತ್ತಿರುವ ಬಗೆ ಎಲ್ಲರಿಗೂ ತಿಳಿದಿರುವಂತದ್ದೇ. ಆದರೆ ಶಿಕ್ಷಣ, ಉದ್ಯೋಗ, ಆಧುನಿಕತೆ, ಸ್ವಾತಂತ್ರ್ಯವನ್ನು ಪಡೆದ ಸಂದರ್ಭದಲ್ಲಿಯೂ ಕೂಡ ಹೆಣ್ಣು ತನ್ನ ಸ್ವಂತ ಅಸ್ತಿತ್ವವನ್ನು ಉಳಿಸಿ, ಗಳಿಸಿಕೊಳ್ಳಲಾಗದಂತಹ ಅಸಹಾಯಕ ಸ್ಥಿತಿಯಲ್ಲಿ ಬಳಲುತ್ತಿರುವುದು ನಂಬಲೇಬೇಕಾದ ಸಂಗತಿ. ಈ ಹಿನ್ನೆಲೆಯಲ್ಲಿ ಬಾನು ಮುಷ್ತಾಕ್ ಅವರ 'ಲವ್ ಬರ್ಡ್ಸ್' ಕರಗಿಹೋಗುತ್ತಿರುವ ಹೆಣ್ಣಿನ ಅಸ್ತಿತ್ವವನ್ನು ಸಮರ್ಥವಾಗಿ ಹಿಡಿದಿಡುವ ಕತೆಗಳಲ್ಲಿ ಒಂದಾಗಿದೆ.

'ಲವ್ ಬರ್ಡ್ಸ್' ಕಥೆಯ ವಸ್ತು, ವಿಷಯ, ಬಂಧ ಸರಳ ಎಂದೆನಿಸಿದರೂ ಅದು ತಿಳಿಸುವ ಆತ್ಯಂತಿಕ ಸತ್ಯ ಮಾತ್ರ ಮನ ಕಲಕುವುದರೊಂದಿಗೆ ಓದುಗರನ್ನು ಆತ್ಮ ವಿಮರ್ಶೆಗೂ ಒಳಗು ಮಾಡುತ್ತದೆ. ಜೊತೆಗೆ ಈ ಕಥೆಯು ಮಹಿಳಾ ಸಾಹಿತ್ಯವನ್ನು ಅರಗಿಸಿಕೊಳ್ಳಲು ಬೇಕಾದ ಮಾನಸಿಕ ಸಿದ್ಧತೆ, ಪ್ರಬುದ್ಧತೆಯ ಅಗತ್ಯತೆ ಮತ್ತು ಅನಿವಾರ್ಯತೆಯನ್ನೂ ಎತ್ತಿಹಿಡಿಯುತ್ತದೆ. ವೈದೇಹಿಯವರ 'ಆತ-ಆಕೆ – ಭಾಷೆ' ಕೂಡ ಹೇಳುತ್ತಿರುವುದು ಇದನ್ನೇ. ಗಂಡು-ಹೆಣ್ಣಿನ ಭಾವ ಸಂವಾದದಲ್ಲಿ ವಿಸ್ತಾರವಾದ ಅಂತರವೊಂದು ಶಾಶ್ವತವಾಗಿ ಉಳಿದುಬಿಟ್ಟಿದೆ. ಇದು ಅರಿವಿಗೆ ಸಂಬಂಧಿಸಿದ್ದೋ, ತಿಳಿವಿಗೆ ಸಂಬಂಧಿಸಿದ್ದೋ, ಅಥವಾ ಗ್ರಹಿಕೆಗೆ ಸಂಬಂಧಿಸಿದ್ದೋ ಎಂಬುದನ್ನೂ ಕೂಡ ಗುರುತಿಸಲಾಗದಷ್ಟು ಸಂಕೀರ್ಣವಾಗಿದೆ. ಗಂಡು-ಹೆಣ್ಣಿನ ನಡುವಿರುವ ಸಂವಾದವನ್ನು ಏಕಸೂತ್ರಕ್ಕೆ ಒಳಪಡಿಸಬೇಕಾದರೆ ಹೆಣ್ಣಿನ ಭಾಷೆ ಬದಲಾಗಬೇಕೆ? ಭಾವನೆ ಬದಲಾಗಬೇಕೆ? ಎಂಬುದೇ ಗೊಂದಲ. ಇದರ ನಡುವೆ ಗಂಡಿಗೆ ತಿಳಿಸಬೇಕಾದ ಭಾಷೆಯೇ ಬೇರೆಯೋ ಅಥವಾ ಅದು ಅವರ ನಿರ್ಲಕ್ಷ್ಯವೋ, ಅಥವಾ ಅರಿಯಬೇಕಾದ ಅವಶ್ಯಕತೆ ಏನೂ ಇಲ್ಲ ಎನ್ನುವ ನಿರ್ದಾಕ್ಷಿಣ್ಯವೋ ಎನ್ನುವುದನ್ನೂ ಕೂಡ ಗುರುತಿಸುವುದು ಕಷ್ಟ. ಇದೆಲ್ಲದರ ಪರಿಣಾಮ ಹೆಣ್ಣಿನ ಅಸ್ತಿತ್ವದ ಚಹರೆಗಳು ಮರೆಗೆ ಸರಿಯುತ್ತಿವೆ ಎಂಬುದೇ ಸತ್ಯ.

**'ಲವ್ ಬರ್ಡ್ಸ್' ಕತೆಯಲ್ಲಿ ಲೇಖಕಿ ನಾಯಕಿಯ ಅಸ್ತಿತ್ವದ ಪಯಣವನ್ನು ಹಂತ ಹಂತವಾಗಿ ತೆರೆದಿಡುತ್ತಾರೆ.**

**ಮೊದಲನೆಯ ಹಂತದಲ್ಲಿ:** ಸುಜಾತ ತಾನು ಪ್ರೀತಿಸಿದವನನ್ನೇ ಮನೆಯವರನ್ನು ಒಪ್ಪಿಸಿ ಮದುವೆಯಾದವಳು. ಈ ಹಂತದಲ್ಲಿ ಅವಳಿಗೆ ತನ್ನ ಬಗ್ಗೆ ಹೆಮ್ಮೆ ಇದೆ. ತನ್ನ

ವ್ಯಕ್ತಿತ್ವವನ್ನು ತನ್ನಿಚ್ಛೆಯಂತೆ ರೂಪಿಸಿಕೊಂಡಿದ್ದರ ಬಗೆಗೆ ಸಂತೋಷವಿದೆ. ಆದರೆ ಆ ನಂತರದಲ್ಲಿ ಅವಳ ಜೀವನದಲ್ಲಿ ನಡೆದ ಘಟನೆಗಳು ಅವಳ ಇಡೀ ಬದುಕನ್ನು ಅವಳಿಚ್ಛೆಗೆ ವಿರೋಧವಾಗಿಯೇ ಕೊಂಡೊಯ್ದಿವೆ. ಇದರ ಬಗೆಗೆ ವಿಷಾದವಿದ್ದರೂ ಕೂಡ ನೆಮ್ಮದಿಯಿಂದ ಬದುಕನ್ನು ಸಾಗಿಸಬೇಕೆಂಬ ಆಶಯ ಕಂಡುಬರುತ್ತದೆ.

**ಎರಡನೆಯ ಹಂತದಲ್ಲಿ:** ಅವಳು ಕಟ್ಟಿಕೊಂಡ ಹಲವು ಕನಸುಗಳು ಕಾರಣಾಂತರಗಳಿಂದ ನನಸಾಗದೇ ಕರಗಿಹೋಗಿವೆ. ದಿನನಿತ್ಯದ ಜಂಜಾಟದಲ್ಲಿ, ಬದುಕಿನ ಪಯಣದಲ್ಲಿ ಅವಳಿಗೆ ತನ್ನಿಚ್ಛೆ ಮತ್ತು ತನ್ನ ಗಂಡನ ಇಚ್ಛೆ ಇವೆರಡರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಹಾಗಾಗಿ ಅವನನ್ನು ಸಂತೋಷದಿಂದ ಇಡುವುದೇ ಅವಳ ಜೀವನದ ಪರಮ ಗುರಿ ಎಂಬಂತೆ ಬದುಕುತ್ತಿದ್ದಾಳೆ. ಅವನ ಸಡಗರ, ಸಂಭ್ರಮದಲ್ಲಿಯೇ ಅವಳ ಬದುಕಿನ ಮಧುರ ಕ್ಷಣಗಳು ಅಡಗಿವೆ ಎಂಬುದು ನಿಜವೋ, ಭ್ರಮೆಯೋ ಎಂಬ ಗೊಂದಲ ಕಾಡುತ್ತದೆ.

**ಮೂರನೇ ಹಂತದಲ್ಲಿ:** ಸಂಬಂಧಗಳ ತಾಕಲಾಟ ಪ್ರಾರಂಭವಾಗಿದೆ. ವಿವಾಹ, ದಾಂಪತ್ಯ, ಕುಟುಂಬಗಳನ್ನು ಕುರಿತಂತೆ ಮತ್ತೆ ಮತ್ತೆ ಆಲೋಚನೆ ಮಾಡುವುದು ಆರಂಭವಾಗಿದೆ. ಇದರಿಂದಾಗಿ ಅವಳಿಗೆ ತನ್ನ ಅಸ್ತಿತ್ವದ ಪ್ರಶ್ನೆ ಪ್ರಧಾನವಾಗಿ ಕಾಡತೊಡಗಿದೆ. ಹಾಗಾಗಿ ಅವಳು ಮತ್ತೆ ಮತ್ತೆ ಚಿಂತಿಸುವುದು ತಾನು ತೋರಿದ, ತೋರಿಸುತ್ತಿರುವ ಪ್ರೀತಿ ತನಗೆ ಸಿಗುತ್ತಿದೆಯೇ ಎಂಬುದನ್ನು ಕುರಿತದ್ದು. ಇದರಿಂದಾಗಿ ಅವಳಿಗೆ ಹಿಂದಿಗಿಂತಲೂ ಭಿನ್ನವಾದ ಸವಾಲುಗಳು ಎದುರಾಗಿವೆ. ಈ ಸವಾಲುಗಳು ಅವಳ ಬದುಕನ್ನು ಮುಂದಕ್ಕೆ ಕೊಂಡೊಯ್ಯುವ ಬಗೆ ಯಾವುದು ಎಂಬುದರ ಬಗೆಗೆ ಮೌನವಾಗಿಸಿದೆ.

**ಕಡೆಯ ಹಂತ:** ಅತ್ಯಂತ ವಿಷಮಕಾರಿಯಾದದ್ದು. ಇಲ್ಲಿ ಅವಳಿಗೆ ತನ್ನ ಇರುವಿಕೆ ಪ್ರಶ್ನೆ, ಬೇಕು–ಬೇಡಗಳ ಪ್ರಶ್ನೆ ಯಾವುದೂ ಮುಖ್ಯವೆನಿಸದೆ ತನ್ನ ಬದುಕನ್ನು ಹೇಗಾದರೂ ಸರಿ ಮುಂದಕ್ಕೆ ಕೊಂಡೊಯ್ಯುವುದಷ್ಟೇ ಮುಖ್ಯವೆನಿಸುತ್ತಿದೆ. ಹಾಗಾಗಿ ಅವಳು ಬಲಿ ಕೊಡುತ್ತಿರುವುದು ಕೇವಲ ತನ್ನ ತಾಯ್ತನವನ್ನು ಮಾತ್ರವಲ್ಲ; ತನ್ನ ಅಸ್ತಿತ್ವವನ್ನು. ಇದಕ್ಕೆ ಕಾರಣರಾದವರನ್ನು ಲೇಖಕಿ ಗುರುತಿಸುವ ಪರಿ ವಿಶಿಷ್ಟವಾದದ್ದು. ಸುಜಾತಾಳ ತಂದೆ, ಗಂಡ ಇಬ್ಬರ ವ್ಯಕ್ತಿತ್ವದಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಅವರಿಬ್ಬರೂ ಕೂಡ ತಮ್ಮ ಅಸ್ತಿತ್ವದ ಉಳಿವಿಗಾಗಿ ಸುಜಾತಾಳ ಅಸ್ತಿತ್ವವನ್ನು ಇಲ್ಲವಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅದಕ್ಕೆ ತಕ್ಕಂತ ಸಂದರ್ಭ ಸನ್ನಿವೇಶಗಳನ್ನು ಸೃಷ್ಟಿಸುವಲ್ಲಿ ಕೂಡ ಜಯಗಳಿಸಿದ್ದಾರೆ.

'ಲವ್ ಬರ್ಡ್ಸ್' ಕಥೆಯ ಸಂದರ್ಭ, ಸನ್ನಿವೇಶ, ಸಂಭಾಷಣೆಗಳನ್ನು ಓದುವಾಗ ಅದು ಒಂದು ಕ್ಷಣ 'ನನ್ನನ್ನೇ ನಾ ಓದಿದೆ' ಎನ್ನುವ ಭಾವವನ್ನು ಮೂಡಿಸುತ್ತದೆ. ಇದು ಕೇವಲ ಸುಜಾತ ಒಬ್ಬಳ ಬದುಕಾಗಿರದೆ ಬಹುತೇಕ ಹೆಣ್ಣು ಅನುಭವಿಸಿರುವ,

ಇಂದಿಗೂ ಅನುಭವಿಸುತ್ತಿರುವ ಸಂಕೀರ್ಣ ಸ್ಥಿತಿಯ ಪ್ರತಿಬಿಂಬವಾಗಿದೆ. ಕೇವಲ ಒಂದು ಹನಿಮೂನ್, ಕೇವಲ ಒಂದು ಸೀರೆ, ಕೇವಲ ಒಂದು ಉಡುಗೊರೆಗಳು ಅವಳ ಬದುಕಿನ ಅತ್ಯಮೂಲ್ಯ ವಸ್ತುಗಳು ಎಂಬುದನ್ನು ಅರಿಯಲಾಗದ ಗಂಡು ಮನಸ್ಥಿತಿಯ ಕ್ರೌರ್ಯವನ್ನೂ, ಅವಳ ಆಂತರ್ಯವನ್ನು ಅರಿಯಬೇಕಾದ ಅವಶ್ಯಕತೆಯೇ ಇಲ್ಲ ಎಂದೆನಿಸುವ ಔದಾಸೀನ್ಯವನ್ನು ಬಯಲಿಗೆಳೆಯುತ್ತದೆ.

ಸುಜಾತ ತನ್ನ ವಿವಾಹ ವಾರ್ಷಿಕೋತ್ಸವದಲ್ಲಿ ಬಯಸುತ್ತಿರುವುದು ಅವನ ಪ್ರೀತಿ ಮತ್ತು ಸಾಂಗತ್ಯ. ಆದರೆ ಅವಳ ಗಂಡ ಅದನ್ನು ಅರಿಯಲಾಗದೆ ಸುಜಾತಾಳ ಮೇಲೆ ತಪ್ಪನ್ನು ಹೊರಿಸುವುದು, ಅವಳ ಇಚ್ಛೆಗಿಂತ ತನಗನಿಸಿದ್ದನ್ನು ಅವಳ ಮೇಲೆ ಹೇರುವುದು, ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಗ್ರಹಿಸುತ್ತಿರುವ ಬಗೆಗೆ ಉತ್ತಮ ನಿದರ್ಶನ. ಮುಂದುವರಿದು ಅವಳ ಸಂತೋಷ, ಸಂಭ್ರಮಗಳು ತಾಯ್ತನದಲ್ಲಿ, ಮಗುವಿನ ಜನನದಲ್ಲಿ ಅಡಗಿವೆ ಎಂದು ಅರಿಯಲಾಗದ ವ್ಯವಸ್ಥೆಯ ಭಾಗವಾಗಿ ಅವಳ ಗಂಡ ಕಂಡುಬರುತ್ತಾನೆ. ಆ ಮಗುವನ್ನು ತೆಗೆಸಿಬಿಡಲು ನೀಡುವ ಕಾರಣಗಳು ಅವಳನ್ನು ಎಷ್ಟರ ಮಟ್ಟಿಗೆ ನೋವಿಗೆ, ಸಂಕಟಕ್ಕೆ ತಳ್ಳುತ್ತವೆ ಎಂಬ ಅರಿವೂ ಇಲ್ಲದೆ ವರ್ತಿಸುವ ಸುಜಾತಾಳ ಗಂಡ, ಹಾಗೂ ತನ್ನ ಕುಟುಂಬದ ಘನತೆಯನ್ನು ಸದಾ ಕಾಲ ಬಯಸುವ ಸುಜಾತಾಳ ತಂದೆ ಪುರುಷ ಪ್ರಧಾನ ವ್ಯವಸ್ಥೆಯ ತಣ್ಣಗಿನ ಕ್ರೌರ್ಯದ ರೂಪಕವಾಗಿ ಕಂಡುಬರುತ್ತಾರೆ.

ವಾಸ್ತವದಲ್ಲಿ ಸುಜಾತ ಅಸಹಾಯಕಳೂ, ದುರ್ಬಲಳೂ ಅಲ್ಲ. ಆದರೆ ವ್ಯವಸ್ಥೆಯಿಂದಾಗಿ ಅವಳಿಗೆ ಎದುರಾದ ಸನ್ನಿವೇಶಗಳು ಅವಳನ್ನು ದುರ್ಬಲಳನ್ನಾಗಿಸಿವೆ. ಇದರಿಂದಾಗಿ ಅವಳು ಹಂತ ಹಂತವಾಗಿ ತನ್ನ ಇಡೀ ಅಸ್ತಿತ್ವವನ್ನು ಕಳೆದುಕೊಂಡು ಬದುಕುವಂತಾಗಿದೆ. ಈ ಕಥೆಯ ಉದ್ದಕ್ಕೂ ವ್ಯಂಗ್ಯ ಮತ್ತು ವಿಷಾದದ ಧ್ವನಿ ನೆಲೆ ನಿಂತಿದೆ. ಆ ಧ್ವನಿಯನ್ನು ಗುರುತಿಸಲಾಗದಿದ್ದರೆ ಕಥೆ ದಿನನಿತ್ಯದ ಬದುಕಿನ ಒಂದು ಘಟನೆಯಾಗಿಯೂ, ಅಷ್ಟೇನೂ ಮುಖ್ಯವಲ್ಲದ ಒಂದು ಸಂಗತಿಯೂ ಎನಿಸಿಬಿಡುತ್ತದೆ.

ಒಟ್ಟಾರೆ ಅಸ್ತಿತ್ವವಾದಿ ಚಿಂತನೆ ಭೂಮಿಯ ಮೇಲೆ ಜೀವಿಸುವ ಪ್ರತಿಯೊಂದು ಜೀವಿಗೂ ಕೂಡ ತನ್ನದೇ ಆದ ಮನಸ್ಸು, ಭಾವನೆಗಳು ಇರುತ್ತವೆ ಎಂಬುದನ್ನು ತಿಳಿಸುತ್ತದೆ. ಈ ಅಸ್ತಿತ್ವವನ್ನು ಉಳಿಸಿಕೊಂಡಾಗ ಮಾತ್ರವೇ ಆ ಜೀವಿಯ ಬದುಕಿಗೊಂದು ಅಧಿಕೃತತೆ ದೊರೆಯುತ್ತದೆ. ಆದರೆ ಹೆಣ್ಣಿನ ಬದುಕು ವ್ಯವಸ್ಥೆಯ ಸುಳಿಯಲ್ಲಿ ಸಿಕ್ಕಿಕೊಂಡು ತನ್ನ ಸ್ವಂತ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದಿರಲಿ, ಅದು ಏನೂ ಎಂಬುದನ್ನೂ ಕೂಡ ಗುರುತಿಸಲಾಗದಂತಹ ಸಂಕೀರ್ಣ ಸ್ಥಿತಿಯನ್ನು ನಿರ್ಮಾಣ ಮಾಡಿದೆ. ಅಸ್ತಿತ್ವವಾದದ ಆಶಯಗಳು ಇರುವಿಕೆ ಮತ್ತು ಆಗುವಿಕೆಯ ಪ್ರಕ್ರಿಯೆಯಲ್ಲಿ ನೆಲೆ ನಿಂತಿವೆ. ಹೆಣ್ಣಿನ ಮಟ್ಟಿಗೆ ಇರುವಿಕೆಯೇ ಸವಾಲಾಗಿರುವಾಗ ಆಗುವಿಕೆ ದೊಡ್ಡ ಮರೀಚಿಕೆ ಎಂದೆನಿಸುತ್ತದೆ. ಬಾನು ಮುಷ್ತಾಕ್ ಅವರ 'ಲವ್

ಬರ್ಡ್ಸ್' ಕತೆ ಪುರುಷ ಪ್ರಧಾನ ವ್ಯವಸ್ಥೆಯ ಸುಳಿಯಲ್ಲಿ ಕರಗುತ್ತಿರುವ ಹೆಣ್ಣಿನ ಅಸ್ತಿತ್ವದ ರೂಪಕವಾಗಿ ಕಂಡುಬರುತ್ತದೆ. ಬಾನು ಮುಷ್ತಾಕ್ ಅವರ ಕತೆಗಳ ಶಕ್ತಿ ಅಡಗಿರುವುದು ಇಂತ ಸರಳ ಕತೆಗಳಲ್ಲಿ. ಸಹಜ, ಸರಳ ಸಂಗತಿಗಳಲ್ಲೂ ಕೂಡ ಅಡಕವಾಗಿರುವ ಸ್ತ್ರೀ ಸಂವೇದನೆಯ ಧ್ವನಿ, ಅವಳು ದಿನನಿತ್ಯ ಎದುರಿಸುತ್ತಿರುವ ಸವಾಲುಗಳು ಈ ಕಥೆಯಲ್ಲಿ ಗಂಭೀರವಾಗಿ ಅಭಿವ್ಯಕ್ತಿಗೊಂಡಿವೆ.

**ಪರಾಮರ್ಶನ ಗ್ರಂಥಗಳು:**

1. ಬಾನು ಮುಷ್ತಾಕ್, (2025), ಹಸೀನಾ ಮತ್ತು ಇತರ ಕತೆಗಳು, ಅಭಿರುಚಿ ಪ್ರಕಾಶನ, ಮೈಸೂರು.
2. ನಾಗಭೂಷಣಸ್ವಾಮಿ ಓ.ಎಲ್., (1998), ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬೆಂಗಳೂರು.
3. ಸಿಮೊನ್ ದ ಬೋವಾ, ಶ್ರೀಮತಿ ಹೆಚ್.ಎಸ್. (ಅನು), (2007), ದಿ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.